ದಿನಾಂಕ **01-10-2021** ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

## ಮುಂದುವರಿದ ಪಾಟೀ ಸವಾಲು ಶ್ರೀ ಎಂ ಜಿ ಆರ್ ಜಿ ವಕೀಲರಿಂದ

ನಾನು ದಿನಾಂಕಃ 15-11-2017 ರಂದು ಆರೋಪಿಗೆ ನೊದಣಿ ಅಂಚೆ ಮತ್ತು ಸಾಮಾನ್ಯ ಅಂಚೆ ಮುಖೇನ ಆರೋಪಿಗೆ ತಿಳುವಳಿಕೆ ನೀಡಿರುತ್ತೇನೆ ಎಂದು ಹೇಳಿರುತ್ತೇನೆ ಎಂದರೆ ಸರಿ. ನಾನು ಆರೋಪಿಗೆ ಕಳುಹಿಸಿದ 2 ತಿಳುವಳಿಕೆಗಳು ದಿನಾಂಕಃ 29-11-2017 ಕ್ಕೆ ವಾಪಸ್ಸು ಬಂದಿರುತ್ತವೆಂದು ತಿಳಿಸಿರುತ್ತೇನೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ನೊಂದಣಿ ಅಂಚೆ ಸ್ವೀಕೃತಿಯು ವಾಪಸ್ಸು ಬಂದಿದ್ದು ಸಾಮಾನ್ಯ ಅಂಚೆಯನ್ನು ಆರೋಪಿಯು ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಆರೋಪಿಗೆ ಸಾಮಾನ್ಯ ಅಂಚೆಯ ಮುಖೇನ ಕಳುಹಿಸಿದ ತಿಳುವಳಿಕೆಯ ತಲುಪಿರುತ್ತದೆ ಎಂದು ಪೂರ್ವ ಭಾವನೆ ಮಾಡಿರುತ್ತೇನೆ ಎಂದು ನಮೂದಿಸಿರುತ್ತೇನೆ ಎಂದರೆ ಸರಿ. ಸಾಮಾನ್ಯ ಅಂಚೆಯು ಆರೋಪಿಗೆ ತಲುಪಿದೆ ಎಂಬುದನ್ನು ತೋರಿಸಲು ಯಾವುದಾದರೂ ದಾಖಲೆಯನ್ನು ನ್ಯಾಯಾಲಯುಕ್ಕೆ ತೋರಿಸುವುದಕ್ಕೆ ಯಾವುದಾದರೂ ದಾಖಲೆಯನ್ನು ಸಲ್ಲಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ಅಂಚೆಯು ಆರೋಪಿಗೆ ತಲುಪಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಪಿರ್ಯಾದಿನಲ್ಲಿ ಎಲ್ಲಿಯೂ ಆರೋಪಿಗೆ ನೋಟೀಸ ತಲುಪಿರುತ್ತದೆ ಎಂದು ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ,

ನಾನು ಆರೋಪಿಗೆ ದಿನಾಂಕಃ 11-09-2016 ರಂದು ಹಣ ನೀಡಿರುತ್ತೇನೆ ಎಂದು ತಿಳಿಸಿದ್ದು ನಾನು ಹಣ ನೀಡುವ ಮೊದಲಿಗೆ ಸುಮಾರು 1 ತಿಂಗಳಿಂದಲೂ ಆರೋಪಿಯು ನನಗೆ ಹಣ ನೀಡುವಂತೆ ಕೇಳಿಕೊಳ್ಳುತ್ತಿದ್ದರು. ಆರೋಪಿ ಹಣ ಕೇಳಿದ 1 ತಿಂಗಳ ನಂತರ ನಾನು ಆರೋಪಿಗೆ ಸಾಲವಾಗಿ ಹಣ ನೀಡಿರುತ್ತೇನೆ. ನನಗೆ ಪ್ರಶಾಂತ ರವರು ಹಣವನ್ನು ನಗದಾಗಿ ನೀಡಿರುತ್ತಾರೆ. ನಾನು ಪ್ರಶಾಂತ ರವರಿಗೆ ಹಣವನ್ನು ಕೆಲವೊಮ್ಮೆ ಬ್ಯಾಂಕಿನ ಮುಖೇನ ವರ್ಗಾವಣೆ ಮಾಡಿದ್ದು ಮತ್ತು ಕೆಲವೊಮ್ಮೆ ನಗದಾಗಿ ನೀಡಿರುತ್ತೇನೆ. ಪ್ರಶಾಂತ ರವರು ತನಗೆ ಮಾರಾಟ ಮಾಡಲು ಒಪ್ಪಿದ್ದಂತಹ ನಿವೇಶನವು ಗ್ರೀನ ಬೆಲ್ಟನಲ್ಲಿ ಬರುತ್ತಿದ್ದ ಕಾರಣ ಸರ್ಕಾರವು ಸದರಿ ನಿವೇಶನಗಳನ್ನು ಮಾರಾಟ ಮಾಡಲು ಸರ್ಕಾರವು ತಿರಸ್ಕರಿಸಿತ್ತು ಎಂದು ನುಡಿಯುತ್ತಾರೆ. ಸದರಿ ಆಸ್ತಿಯು ಎಲ್ಲಿ ಇದೆ ಅದರ ಸರ್ವೆ ನಂಬರ ಎನು ಎಂದು ನನಗೆ ಗೊತ್ತಿಲ್ಲ.

ದಿನಾಂಕಃ 11-09-2017 ರಂದು ಆರೋಪಿಗೆ ಸಾಲವನ್ನು ನೀಡಿದಾಗ ಎನಾದರೂ ದಾಖಲೆಯನ್ನು ಪಡೆದುಕೊಂಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಮೊದಲಿಗೆ ಚೆಕ್ಕನ್ನು ಪಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ, ತದನಂತರದಲ್ಲಿ ಆರೋಪಿ ನನಗೆ ಚೆಕ್ಕು ನೀಡುತ್ತೇನೆ ಎಂದು ಹೇಳಿದ್ದು ಅಕ್ಟೋಬರ ತಿಂಗಳಲ್ಲಿ ಚೆಕ್ಕ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಗೆ ಬ್ಯಾಂಕ ಮುಖೇನ ಹಣವನ್ನು ನೀಡಲು ನನಗೆ ಯಾವುದೇ ತೊಂದರೆ ಇರಲಿಲ್ಲ, ಸಾಕ್ಷಿ ಮುಂದುವರಿದು ಆರೋಪಿ ಹಣವನ್ನು ನಗದಾಗಿ ನೀಡುವಂತೆ ಕೇಳಿದ ಕಾರಣ ನಗದಾಗಿ ನೀಡಿರುತ್ತೇನೆ.

ಸಿ ಸಿ ನಂಬರ 80 -2018 ಪಿ ಡಬ್ಲೂ 01

ನಾನು ದಿನಾಂಕಃ 11-09-2016 ರಂದು ಆರೋಪಿಗೆ ಸಾಲವಾಗಿ ನೀಡಿದ 20 ಲಕ್ಷ ರುಪಾಯಿ ಹಣ ಇತ್ತು ಎಂದು ತೋರಿಸಲು ಯಾವುದಾದರೂ ದಾಖಲಾತಿ ಇದೆಯೇ ಎಂಬ ಪ್ರಶ್ನೆಗೆ ಸಾಕ್ಷಿ ಇದೆ ಎಂದು ನುಡಿಯುತ್ತಾರೆ. ನಮ್ಮ ಮತ್ತು ಆರೋಪಿತರ ಕುಟುಂಬವು ಪರಸ್ಪರ ಅನ್ಯೋನ್ಯವಾಗಿತ್ತು ಎಂದರೆ ಸರಿ. ನಮ್ಮ ಎರಡೂ ಕುಟುಂಬಗಳ ನಡುವೆ ಉತ್ತಮ ಒಡನಾಟ ಇತ್ತು ಎಂದರೆ ಸರಿ. ನನ್ನ ಮತ್ತು ಆರೋಪಿತರ ಶ್ರೀಮತಿಯರು ಪರಸ್ಪರ ಪರಿಚಿತರು ಎಂದರೆ ಸರಿ. ಆರೋಪಿಯ ಪತ್ನಿಯ ಹೆಸರು ವಿಶ್ವ ಭಾರತೀ ಎಂದರೆ ಸರಿ, ಅವರು ನನಗೆ ಪರಿಚಿತರು ಎಂದರೆ ಸರಿ. ಆರೋಪಿತರ ವ್ಯವಹಾರದಲ್ಲಿ ಅವರು ತನ್ನ ಪತ್ನಿಯ ಸಲಹೆ ಸಹಕಾರಗಳನ್ನು ಪಡೆಯುತ್ತಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಆರೋಪಿಯು ತನ್ನ ಎಲ್ಲಾ ವ್ಯವಹಾರಗಳಲ್ಲಿ ತನ್ನ ಪತ್ನಿಯ ಸಲಹೆ ಮತ್ತು ಸಹಕಾರವನ್ನು ಪಡೆದುಕೊಳುತ್ತಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ಆಗಿಂದಾಗೇ ಆರೋಪಿತರ ಕಛೇರಿ ಮತ್ತು ಮನೆಗೆ ಹೊಗುತ್ತಿದ್ದೆ ಎಂದರೆ ಸರಿ. ಆರೋಪಿತರ ಕಛೇರಿಯು ಬೆಂಗಳೂರಿನ ಯಶವಂತಪುರದಲ್ಲಿ ಇತ್ತು ಎಂದರೆ ಸರಿ. ನಾನು ಆರೋಪಿಯ ಯಶವಂತಪುರದ ಕಛೇರಿಯಿಂದ ಚೆಕ್ಕನ್ನು ತೆಗೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ಯಾವುದೇ ಹಣವನ್ನು ನೀಡಿರುವುದಿಲ್ಲ ಆರೋಪಿತರ ಕಛೇರಿಯಿಂದ ಚೆಕ್ಕನ್ನು ತೆಗೆದುಕೊಂಡು ಹೋಗಿ ಅದನ್ನು ದುರಪಯೋಗ ಪಡಿಸಿಕೊಂಡು ಈ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶವನ್ನು ಕೋರಿದ್ದು ಅನುಮತಿಸಿ
ಸಮಯಾವಕಾಶವನ್ನು ನೀಡಿ ಕೇಸನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.

ಪ್ರ.ದ.ನ್ಯಾದಂ., ಸಂಡೂರು.